ಪರಿವರ್ತಕಗಳು ಸುಟ್ಟುಹೋಗುತ್ತಿರುವುದರ ಬಗ್ಗೆ

99 (661) ಶ್ರೀ ಸಿದ್ದು ಸವದಿ (ತೆರದಾಳ) :– ಮಾನ್ಯ ಮುಖ್ಯ ಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಜಮಖಂಡಿ ವಿಭಾಗದಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಪರಿವರ್ತಕಗಳು ಸುಟ್ಟು ರೈತರಿಗೆ ಮತ್ತು ಇಲಾಖೆಗೂ ದೊಡ್ಡ ಪ್ರಮಾಣದ ಹಾನಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ರೀತಿ ದೊಡ್ಡ ಪ್ರಮಾಣದಲ್ಲಿ ಪರಿವರ್ತಕಗಳು ಸುಟ್ಟು ಹೋಗುತ್ತಿರಲು ಕಾರಣಗಳೇನು ?

ಇ) ಹೆಚ್ಚಿನ ಲೋಡ್‌ನಿಂದ ಸುಡುತ್ತಿದ್ದಲ್ಲಿ ಅದನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

ಈ) ಪ್ರತಿ ವರ್ಷ ಪರಿವರ್ತಕಗಳ ಖರೀದಿ ಮತ್ತು ದುರಸ್ಥಿಗಳಿಗೆ ಎಷ್ಟು ಹಣ ಖರ್ಚಾಗುವುದು ? (ರಾಜ್ಯದ ಎಲ್ಲಾ ಕಂಪನಿಗಳ ವಿಭಾಗವಾರು ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :–

ಅ) ಗಮನಕ್ಕೆ ಬಂದಿರುತ್ತದೆ.

ಆ) ಅನಧಿಕೃತವಾದ ಪಂಪ್‌ಸೆಟ್‌ಗಳ ಹೆಚ್ಚುವರಿ ಹೊರೆಯಿಂದ

ಇ) ಹೊಸದಾಗಿ ಪರಿವರ್ತಕಗಳನ್ನು ಅಳವಡಿಸಲಾಗಿದೆ.

ಈ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ಪ್ರತಿ ವರ್ಷ ಅಗತ್ಯಕ್ಕೆ ಅನುಗುಣವಾಗಿ ಹೊಸ ವಿತರಣಾ ಪರಿವರ್ತಕಗಳನ್ನು ಖರೀದಿಸಲಾಗುವುದು. 2009–10 ನೇ ಸಾಲಿನಲ್ಲಿ ವಿವಿಧ ಸಾಮರ್ಥ್ಯದ 4242 ಸಂಖ್ಯೆ ಪರಿವರ್ತಕಗಳನ್ನು ಖರೀದಿಸಲಾಗಿದ್ದು. ಇದಕ್ಕಾಗಿ ರೂ. 2247 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ 2009–10 ನೇ ಸಾಲಿನಲ್ಲಿ ಪರಿವರ್ತಕಗಳ ಪ್ರಮುಖ ಮತ್ತು ಲಘು ದುರಸ್ತಿಗಾಗಿ 1765 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ವಿಭಾಗವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ 2009–10ನೇ ಸಾಲಿನಲ್ಲಿ ವಿದ್ಯುತ್ ವಿತರಣಾ ಪರಿವರ್ತಕಗಳ ಖರೀದಿ ಹಾಗೂ ದುರಸ್ತಿಗಳಿಗೆ ಖರ್ಚಾಗಿರುವ ವೆಚ್ಚದ ವಿಭಾಗವಾರು ವಿವರಗಳು ಈ ಕೆಳಗಿನಂತಿವೆ : ಪರಿವರ್ತಕಗಳ ಖರೀದಿ ವೆಚ್ಚ ರೂ. 592.84 ಲಕ್ಷಗಳು

ಕ್ರ.ಸಂ.	ವಿಭಾಗ	2009–10
1.	ಮಂಗಳೂರು	178.98
2.	ಉಡುಪಿ	56.00
3.	ಪುತ್ತೂರು	35.25
4.	ಶಿವಮೊಗ್ಗ	180.64
5.	ಸಾಗರ	76.04
6.	ಚಿಕ್ಕಮಗಳೂರು	26.75
7.	ಕಡೂರು	39.18
	ಒಟ್ಟು	592.84

ಪರಿವರ್ತಕಗಳ ದುರಸ್ತಿ ಪೆಚ್ಚ ರೂ. 452.93 ಲಕ್ಷಗಳು

ಕ್ರ.ಸಂ.	ವಿಭಾಗ	2009–10
1.	ಮಂಗಳೂರು	34.403
2.	ಉಡುಪಿ	56.590
3.	ಪುತ್ತೂರು	96.276
4.	ಶಿವಮೊಗ್ಗ	83.60
5.	ಸಾಗರ	87.02
6.	ಚಿಕ್ಕಮಗಳೂರು	44.60
7.	ಕಡೂರು	50.44
	ಒಟ್ಟು	452.93

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ 2009–10 ರಲ್ಲಿ 8882 ಸಂಖ್ಯೆಯ ವಿವಿಧ ಸಾಮರ್ಥ್ಯದ ಪರಿವರ್ತಕಗಳನ್ನು ರೂ. 4924 ಲಕ್ಷಗಳಲ್ಲಿ ಖರೀದಿಸಿ ವಿಭಾಗಗಳಿಗೆ ವಿತರಿಸಲಾಗಿದೆ.

ಸಾಮರ್ಥ್ಯವಾರು ಖರೀದಿ ವೆಚ್ಚ ಈ ಕೆಳಕಂಡಂತಿದೆ :–

ಕ್ರ.ಸಂ.	ಸಾಮರ್ಥ್ಯ (ಕೆ.ವಿ.ಎ.)	ಪರಿಮಾಣ (ಸಂಖ್ಯೆಯಲ್ಲಿ)	ಖರೀದಿ ವೆಚ್ಚ (ರೂ. ಲಕ್ಷಗಳಲ್ಲಿ)
1.	15	2500	1174
2.	25	5495	3045
3.	63	660	489
4.	100	227	216
	ಒಟ್ಟು	8882	4924

2009–10 ರಲ್ಲಿ 5901 ಪರಿವರ್ತಕಗಳು ವಿಫಲಗೊಂಡು ಅವುಗಳಿಗೆ ತಗುಲಿದ ದುರಸ್ತಿ ವೆಚ್ಚ ರೂ. 3103.96 ಲಕ್ಷಗಳಾಗಿರುತ್ತದೆ.

ವಿಭಾಗವಾರು ವೆಚ್ಚ ಈ ಕೆಳಕಂಡಂತಿದೆ:-

ಕ್ರ. ಸಂ.	ವಿಭಾಗ	ದುರಸ್ತಿ ವೆಚ್ಚ (ರೂ. ಲಕ್ಷಗಳಲ್ಲಿ)
1.	ನಗರ ವಿಭಾಗ, ಮೈಸೂರು	130.40
2.	ಹೆಚ್ಚುವರಿ ನಗರ ವಿಭಾಗ, ಮೈಸೂರು	53.68
3.	ಗ್ರಾಮೀಣ ವಿಭಾಗ, ಮೈಸೂರು	241.47
4.	ಹುಣಸೂರು	175.67
5.	ಚಾಮರಾಜನಗರ	319.73
6.	ಕೊಳ್ಳೇಗಾಲ	
7.	ಮಡಿಕೇರಿ	110.90
8.	ಮಂಡ್ಯ	541.50
9.	ಹೆಚ್ಚುವರಿ ಮಂಡ್ಯ	65.10
10.	ಪಾಂಡವಪುರ	403.46

1	2	3
11.	ನಾಗಮಂಗಲ	
12.	ಹಾಸನ	168.91
13.	ಚನ್ನರಾಯಪಟ್ಟಣ	493.53
14.	ಅರಸೀಕೆರೆ	231.06
15.	ಹೊಳೇನರಸೀಪುರ	168.55
	ಒಟ್ಟು	3103.96

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ 2009–10ನೇ ಸಾಲಿನ ಹಣಕಾಸು ವರ್ಷದಲ್ಲಿ ಪರಿವರ್ತಕಗಳ ಖರೀದಿಗೆ ತಗಲಿರುವ ವೆಚ್ಚ ರೂ. 2679 ಲಕ್ಷಗಳು ಈ ಕೆಳಗಿನಂತಿದೆ :–

ಕ್ರ.ಸಂ.	ಪರಿವರ್ತಕದ ಸಾಮರ್ಥ್ಯ (ಕೆ.ವಿ.ಎ.)	ಪರಿಮಾಣ (ಸಂಖ್ಯೆಗಳು)	ಮೊತ್ತ (ಲಕ್ಷ ರೂ. ಗಳಲ್ಲಿ)
1.	25	2445	1066
2.	63	1204	851
3.	100	831	762
	ಒಟ್ಟು	4480	2679

ಪರಿವರ್ತಕಗಳ ದುರಸ್ತಿಗಳ ತಗಲಿರುವ ವೆಚ್ಚ ರೂ. 1832.09 ಲಕ್ಷಗಳು

ಏಪ್ರಿಲ್ 2009 ರಿಂದ ಮಾರ್ಚ್ 2010 ರವರೆಗೆ ರಿಪೇರಿ ಕೇಂದ್ರ/ವಿಭಾಗವಾರು ವಿವರ :–

ಕ್ರ.	ರಿಪೇರಿ ಕೇಂದ್ರ/	ದುರಸ್ತಿಗೊಳಿ–	ವೆಚ್ಚ

ಸಂ.	ವಿಭಾಗ	ಸಿದ್ದ ಪರಿವರ್ತಕಗಳ ಸಂಖ್ಯೆ	(ರೂ. ಲಕ್ಷಗಳಲ್ಲಿ)
1.	ಹುಬ್ಬಳ್ಳಿ–I	176	29.87
2.	ಹುಬ್ಬಳ್ಳಿ–II	389	45.10
3.	ಗದಗ	913	123.88
4.	ಹಾವೇರಿ	701	88.85
5.	ರಾಣೆಬೆನ್ನೂರು	657	81.61
6.	ಕುಮಟ	307	36.48
7.	ಶಿರಸಿ	506	67.37
8.	ಬೆಳಗಾಂ	585	92.59
9.	ಬೈಲಹೊಂಗಲ	1276	183.69
10.	ಘಟ್ಟಪ್ರಭ	1347	203.88
11.	ಅಥಣಿ	690	112.99
12.	ಚಿಕ್ಕೋಡಿ	612	102.41
13.	ಬಿಜಾಪುರ	1354	194.22
14.	ಇಂಡಿ	936	142.22
15.	ಬಾಗಲಕೋಟೆ	1386	178.20
16.	ಜಮಖಂಡಿ	1181	148.72
	ಒಟ್ಟು	13016	1832.09

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ **2009–10**ನೇ ಸಾಲಿನ ಹಣಕಾಸು ವರ್ಷದಲ್ಲಿ ವಿದ್ಯುತ್ ಪರಿವರ್ತಕಗಳ ಖರೀದಿಗೆ ತಗಲಿರುವ ವೆಚ್ಚ ಈ ಕೆಳಗಿನಂತಿದೆ :–

ಕ್ರ.ಸಂ.	ಪರಿವರ್ತಕದ	ಪರಿಮಾಣ	ಮೊತ್ತ

	ಸಾಮರ್ಥ್ಯ (ಕೆ.ವಿ.ಎ.)	(ಸಂಖ್ಯೆಗಳು)	(ರೂ. ಲಕ್ಷ ಗಳಲ್ಲಿ)
1.	25	1490	636.76
2.	63	1520	1075.24
3.	100	1449	1312.12
	ಒಟ್ಟು	4459	3024.12

ಪರಿವರ್ತಕಗಳ ದುರಸ್ತಿಗಳಿಗೆ ತಗಲಿರುವ ವೆಚ್ಚ ಏಪ್ರಿಲ್ 2009 ರಿಂದ ಮಾರ್ಚ್ 2010 ರವರೆಗೆ ವಿಭಾಗವಾರು ವಿವರ :

ಕ್ರ. ಸಂ.	ವಿಭಾಗ	ದುರಸ್ತಿಗೆ ತಗಲಿರುವ ವೆಚ್ಚ (ರೂ. ಲಕ್ಷಗಳಲ್ಲಿ)
1.	ಗುಲಬರ್ಗಾ–1	261.91
2.	ಗುಲಬರ್ಗಾ–2	113.65
3.	ಯಾದಗಿರಿ	156.65
4.	ಬೀದರ್	127.57
5.	ಹುಮನಾಬಾದ	65.62
6.	ಬಳ್ಳಾರಿ	87.43
7.	ಹೊಸಪೇಟ್	131.33
8.	ರಾಯಚೂರು	111.53
9.	ಕೊಪ್ಪಳ್	176.24
	ಒಟ್ಟು	1232.03

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಆರ್ಥಿಕ ವರ್ಷ 2009–10 ರಲ್ಲಿ ವೃತ್ತ/ವಿಭಾಗವಾರು ಪರಿವರ್ತಕ ದುರಸ್ತಿಗಳಿಗೆ ಖರ್ಚು ಮಾಡಲಾದ ಹಣದ ವಿವರಗಳು

		ಲಕ್ಷ ರೂ.ಗಳಲ್ಲಿ

ವಿಭಾಗ/ವೃತ್ತಗಳು	ಪರಿವರ್ತಕಗಳ ಪ್ರಮುಖ ದುರಸ್ತಿಗೆ ಖರ್ಚದಾದ ಹಣ (74.116)	ಪರಿವರ್ತಕಗಳ ದುರಸ್ತಿಗೆ ಖರ್ಚದಾದ ಹಣ (74.117)	ಒಟ್ಟು
ಪೂರ್ವ		8.26	8.26
~~ಅಧಿಕ ಪೂರ್ವ~~		~~6.27~~	~~6.27~~
ದಕ್ಷಿಣ		10.4	10.40
ಅಧಿಕ ದಕ್ಷಿಣ		11.13	11.13
~~ಎಚ್.ಎಸ್.ಆರ್.~~		~~3.66~~	~~3.66~~
ದಕ್ಷಿಣ ವೃತ್ತ	0.00		39.72
ಪಶ್ಚಿಮ		5.33	5.33
ಅಧಿಕ ಪಶ್ಚಿಮ		4.1	4.10
ಕೇಂದ್ರಿಯ		5.49	5.49
ಅಧಿಕ ಕೇಂದ್ರಿಯ		12.74	12.74
ಉತ್ತರ		12.04	12.04
ಅಧಿಕ ಉತ್ತರ		15.82	15.82
ಉತ್ತರ ವೃತ್ತ	0.00		55.52
ನೆಲಮಂಗಲ		35.03	35.03
ಯಲಹಂಕ		44.99	44.99
ರಾಮನಗರ		6.48	6.48
ಚಂದಾಪುರ		20.34	20.34
ಗ್ರಾಮೀಣ ವೃತ್ತ	131.53		238.37
ಕೋಲಾರ		26.65	26.65
ಕೆ.ಜಿ.ಎಫ್.		2.7	2.70
ಚಿಕ್ಕಬಳ್ಳಾಪುರ		81.97	81.97
ಕೋಲಾರ ವೃತ್ತ	322.74		434.06
ತುಮಕೂರು		39.57	39.57
ತಿಪಟೂರು		28.84	28.84
ಮಧುಗಿರಿ		15.38	15.38
ತುಮಕೂರು ವೃತ್ತ	506.10		589.89
ದಾವಣಗೆರೆ		2.04	2.04
ಹರಿಹರ		1.07	1.07
ಚಿತ್ರದುರ್ಗ		2.66	2.66
ಹಿರಿಯೂರು		8.23	8.23
ದಾವಣಗೆರೆ ವೃತ್ತ	393.25		407.25
ಬೆ.ವಿ.ಕಂ.	1353.62	411.19	1764.81

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ರೀತಿ ದೊಡ್ಡ ಪ್ರಮಾಣದಲ್ಲಿ ಪರಿವರ್ತಕಗಳು ಸುಟ್ಟುಹೋಗಲು ಕಾರಣವೇನೆಂದರೆ, ಅನಧಿಕೃತವಾದ ಪಂಪ್‌ಸೆಟ್‌ಗಳ ಹೆಚ್ಚುವರಿ ಹೊರೆಯಿಂದಾಗುವಂಥದ್ದು ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಆ ರೀತಿ ಅನಧಿಕೃತವಾದ ಪಂಪ್‌ಸೆಟ್‌ಗಳನ್ನು ಕೂಡಿಸುವುದಕ್ಕೆ ಕಾರಣವೇನು ?

ಅದನ್ನು ಅಧಿಕೃತವಾಗಿ ರೈತರುಗಳು ನಿರಂತರವಾಗಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯನ್ನು ಏನು ಕೇಳುತ್ತಾರೋ ಆಗ ಚಾಲ್ತಿಯಲ್ಲಿಟ್ಟರೆ ಆಗ ಅನಧಿಕೃತವಾಗಿ ಹೊರೆ ಬೀಳುವುದಿಲ್ಲ. ಇದು ಒಂದು. ಇನ್ನು ಎರಡನೆಯದಾಗಿ ನಿರಂತರವಾಗಿ ರೈತರುಗಳು ಕರೆಂಟ್‌ನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ರಾಜ್ಯದ ಬೊಕ್ಕಸಕ್ಕೂ ಆದಾಯ ಬರುತ್ತದೆ. ಅದೇನು ನಿಯಮ ಇರುತ್ತದೋ ಆ ನಿಯಮಾನುಸಾರ ತೆಗೆದುಕೊಳ್ಳತ್ತಾರೆ. ಅದನ್ನೂ ಮಾಡದೆ ಇದ್ದರೆ ಅನಧಿಕೃತವಾಗಿ ತೆಗೆದುಕೊಳ್ಳುವುದರಿಂದ ಇಲಾಖೆಗೂ ಹಾನಿಯಾಗುತ್ತದೆ ಮತ್ತು ರೈತರಿಗೂ ಕೂಡ ದೊಡ್ಡ ಪ್ರಮಾಣದಲ್ಲಿ ಹಾನಿಯಾಗುತ್ತದೆ. ಆದುದರಿಂದ ಅಧಿಕೃತವಾಗಿ ತೆಗೆದುಕೊಳ್ಳಲು ಮಾಡಬೇಕಾದಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು ಮೂರನೆಯದಾಗಿ ಹೊಸ ಪರಿವರ್ತಕಗಳನ್ನು ಅಳವಡಿಸಲಾಗಿದೆಯೆಂದು ಉತ್ತರವನ್ನು ಕೊಟ್ಟಿದ್ದಾರೆ. ಈಗೇನು ಪರಿವರ್ತಕಗಳನ್ನು ದುರಸ್ತಿ ಮಾಡಿಸುತ್ತಿದ್ದಾರೆ. ಅಲ್ಲಿ ಅತ್ಯಂತ ಕಳಪೆ ಮಟ್ಟದಲ್ಲಿ ದುರಸ್ತಿಯನ್ನು ಮಾಡಲಾಗುತ್ತಿದೆ. ಅವರು ಪರಿವರ್ತಕಗಳನ್ನು ದುರಸ್ತಿ ಮಾಡಿ ಕೂಡಿಸಿದ ಒಂದೇ ದಿವಸದಲ್ಲಿ, ಒಂದೇ ತಾಸಿನಲ್ಲಿ ಮತ್ತೆ ಆ ಪರಿವರ್ತಕ ಸುಡುವಂಥ ಪರಿಸ್ಥಿತಿ ಇದೆ. ಈ ರೀತಿಯ ಪರಿಸ್ಥಿತಿ ಇಡೀ ರಾಜ್ಯದಲ್ಲಿ ಇದೆ. ಆ ಕಾರಣಕ್ಕಾಗಿ ಸರ್ಕಾರಕ್ಕೆ ನಮ್ಮ ವಿನಂತಿಯೇನೆಂದರೆ, ಸರ್ಕಾರದ ಕಂಪನಿಗಳಿಂದಲೇ ಖಿದ್ದಾಗಿ, ಇನ್ನೂ ಹೆಚ್ಚು ಸಿಬ್ಬಂದಿಗಳನ್ನು ಹಾಕಿಕೊಂಡು ಸರ್ಕಾರದ ಕಂಪನಿಗಳಿಂದಲೇ ದುರಸ್ತಿ ಮಾಡಿಸಿ, ರಿವೈಂಡಿಂಗ್ ಮಾಡಿಸಿ ಹಾಕಿದರೆ ಮಾತ್ರ ಒಳ್ಳೆಯ ಪರಿವರ್ತಕವನ್ನು ರೈತರಿಗೆ ಕೊಟ್ಟಂಥಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಅತ್ಯಂತ ಹೆಚ್ಚು ಪಂಪ್‌ಸೆಟ್‌ಗಳು ಹುಬ್ಬಳ್ಳಿ ವಿಭಾಗದಲ್ಲಿದೆ. ಆದರೆ ನಾನು ಪ್ರಶ್ನೆ ಹಾಕಿ ಯಾವ ಯಾವ ವಿಭಾಗದಲ್ಲಿ ಎಷ್ಟೆಷ್ಟು ಖರೀದಿ ಮಾಡಿದ್ದೀರಿ ? ಎಷ್ಟಷ್ಟು ಹೊಸ ಪರಿವರ್ತಕಗಳನ್ನು ಕೂಡಿಸಿದ್ದೀರಿ ಮತ್ತು ಎಷ್ಟೆಷ್ಟು ಪರಿವರ್ತಕಗಳನ್ನು ದುರಸ್ತಿ ಮಾಡಿಸಿದ್ದೀರಿ ಎಂದು ಕೇಳಿದರೆ ಅತ್ಯಂತ ಕಡಿಮೇ ಹಣವನ್ನು ಹುಬ್ಬಳ್ಳಿ ವಿಭಾಗಕ್ಕೆ ಈ ವಿಚಾರದಲ್ಲಿ ಖರ್ಚು ಮಾಡಿದ್ದಾರೆ. ಬೇರೆಯದನ್ನು ಉದಾಹರಣೆಯಾಗಿ ಹೇಳಬೇಕೆಂದರೆ, ಚಾಮುಂಡೇಶ್ವರಿಗೆ 49 ಕೋಟಿ 24 ಲಕ್ಷದ್ದು ಖರೀದಿ ಮಾಡಿದ್ದಾರೆ ಮತ್ತು 35 ಕೋಟಿಯದ್ದು ದುರಸ್ತಿಯಾಗಿದೆ. ಅದೇ ರೀತಿ ಗುಲ್ಬರ್ಗಾಕ್ಕೆ 30 ಕೋಟಿ 24 ಲಕ್ಷ ಖರೀದಿ ಮಾಡಿದ್ದರೆ 12 ಕೋಟಿ 32 ಲಕ್ಷದ್ದು ದುರಸ್ತಿ ಮಾಡಿದ್ದಾರೆ. ಆದರೆ ಅತ್ಯಂತ ಹೆಚ್ಚು ಪಂಪ್‌ಸೆಟ್‌ಗಳನ್ನು ಹೊಂದಿರುವಂಥ ಹುಬ್ಬಳ್ಳಿ ವಿಭಾಗಕ್ಕೆ ಕೇವಲ 26 ಕೋಟಿ ರೂ.ಗಳ ಖರೀದಿ ಮಾಡಿದ್ದಾರೆ ಮತ್ತು 18 ಕೋಟಿ ರೂಪಾಯಿಗಳ ದುರಸ್ತಿ ಕೆಲಸವನ್ನು ಮಾಡಿದ್ದಾರೆ. ಇದು ಕೂಡ ತಾರತಮ್ಯವಾದಂತಾಗುತ್ತದೆ. ಎಲ್ಲಿ ಪಂಪ್‌ಸೆಟ್‌ಗಳು ಹೆಚ್ಚು ಇರುತ್ತವೆಯೋ, ಎಲ್ಲಿ ದುರಸ್ತಿ ಹೆಚ್ಚು ಇರುತ್ತದೆಯೋ ಅಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದು ವಿನಂತಿಯನ್ನು ಮಾಡುತ್ತೇನೆ. ಇನ್ನು ರೈತರಿಗೆ ಟಿ.ಸಿ.ಗಳು ಸುಟ್ಟಾಗ ಸುಮಾರು ಒಂದು ತಿಂಗಳು, ಎರಡು ತಿಂಗಳು ಅಥವಾ ಸುಮಾರು ತಿಂಗಳಾದ ನಂತರ ಟಿ.ಸಿ.ಗಳನ್ನು ಕೊಡುತ್ತಿರುವುದರಿಂದ ಅಲ್ಲಿ ಬೆಳೆದಂಥ ಇಡೀ ಬೆಳೆ ಹಾಳಾಗುವಂಥ ಪರಿಸ್ಥಿತಿ ಬಂದಿರುತ್ತದೆ. ಹೀಗಾಗಿ ರೈತರ ಪರಿಸ್ಥಿತಿ ಅಲ್ಲಿ ಚಿಂತಾಜನಕವಾಗಿದೆ. ಸರ್ಕಾರ

ಈ ಕಡೆ ಹೆಚ್ಚು ಗಮನ ಕೊಟ್ಟು ತಕ್ಷಣ ನಾಲ್ಕು ದಿವಸಗಳೊಳಗೆ, ಐದು ದಿವಸಗಳೊಳಗೆ ಅಥವಾ ಹೆಚ್ಚೆಂದರೆ ಒಂದು ವಾರದೊಳಗೆ ಪರಿವರ್ತಕಗಳು ರೈತರಿಗೆ ಮುಟ್ಟುವಂತೆ ಸರ್ಕಾರ ಮಾಡಿದರೆ ರೈತರ ಜೀವನ ಸಾರ್ಥಕವಾಗುತ್ತದೆ ಎನ್ನತಕ್ಕಂಥ ಮಾತನ್ನು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮಾನ್ಯ ಸಿದ್ದು ಸವದಿಯವರಿಗೆ ಸಾಕಷ್ಟು ಜ್ಞಾನ ಇದೆ, ಅನುಭವವಿದೆ. ಆ ಹಿನ್ನೆಲೆಯಲ್ಲಿ ಅವರು ಪರಿವರ್ತಕಗಳ ವಿಫಲತೆಗಳ ಬಗ್ಗೆ ಮತ್ತು ವೆಚ್ಚವನ್ನು ಕಡಿಮೆ ಮಾಡಿ ದಷ್ಟು ಬೇಗ ಪರಿವರ್ತಕಗಳನ್ನು ಸರಿಪಡಿಸಿಕೊಡುವುದರ ಬಗ್ಗೆ ಅತ್ಯಂತ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದೀರಿ. ಅದನ್ನು note ಮಾಡಿಕೊಂಡು ಆ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟು ಪರಿವರ್ತಕಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದರ ಬಗ್ಗೆ ನಿಮ್ಮಂತೆ ಯಾರ್ಯಾರಿಗೆ ಕಾಳಜಿ ಇದೆ. ಅದಕ್ಕೆ ಒಂದು ಸಭೆಯನ್ನು ಕರೆದು ನಿಮ್ಮಿಂದ ಇನ್ನು ಹೆಚ್ಚು ಮಾಹಿತಿಯನ್ನುಪಡೆದು ಅದನ್ನು ಸರಿಪಡಿಸುವುದಕ್ಕೆ ನಾನು ಸಂಪೂರ್ಣ ಪ್ರಯತ್ನ ಮಾಡುತ್ತೇನೆ. ಜಮಖಂಡಿ ತಾಲ್ಲೂಕಿನಲ್ಲಿ ಬಹಳ ಮುಖ್ಯವಾಗಿ ಒಟ್ಟು 10,186 ವಿತರಣಾ ಪರಿವರ್ತಕಗಳು ಇವೆ. ಅದರಲ್ಲಿ ವಿಫಲವಾದ ಪರಿವರ್ತಕಗಳ ಪೈಕಿ 54 ಮಾತ್ರ ಬದಲಾವಣೆ ಮಾಡಬೇಕಾಗಿದೆ. ಶೇಕಡ 10 ರಷ್ಟು ಪರಿವರ್ತಕಗಳು over load ಆಗಿವೆ. ಹೀಗಾಗಿ ಇವುಗಳನ್ನು ಸರಿಪಡಿಸುವುದಕ್ಕೆ ಹತ್ತು ಕೋಟಿ ರೂಪಾಯಿಯ ಅಗತ್ಯವಿದೆ. ಜಮಖಂಡಿ ತಾಲ್ಲೂಕಿನಲ್ಲಿ ಒಟ್ಟು 7,285 ನೀರಾವರಿ ಪಂಪ್ ಸೆಟ್‌ಗಳು service ಆಗಬೇಕಾಗಿದೆ. ಒಟ್ಟು 6,554 ಅನಧಿಕೃತ ನೀರಾವರಿ ಪಂಪ್ ಸೆಟ್‌ಗಳು ಹಾಗೂ 1,297 ನೀರಾವರಿ ಪಂಪ್‌ಸೆಟ್‌ಗಳು ಜನರಲ್ ಗ್ರೂಪ್‌ಗೆ ಸೇರಿದವುಗಳಾಗಿವೆ. ಈ ಪ್ರಮಾಣದಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಆದರಿಂದ ಏಳು-ಎಂಟು ಸಾವಿರ ಪಂಪ್‌ಸೆಟ್‌ಗಳು ಅನಧಿಕೃತವಾಗಿ ವಿದ್ಯುತ್ ಉಪಯೋಗಿಸಿಕೊಂಡು ಈ ರೀತಿ ಕೆಲಸ ಮಾಡುತ್ತಿವೆಯೆಂದರೆ, ವಿದ್ಯುತ್‌ನ್ನು ಎಲ್ಲಿಂದ ತರಬೇಕು, ವಿದ್ಯುತ್ ವಿತರಣೆಯ್ನು ಹೇಗೆ ಮಾಡಬೇಕು, ಇದನ್ನು ಹೇಗೆ control ಮಾಡಬೇಕು? ಅದಕ್ಕೂ ಕೂಡ ನೀವು ಸಲಹೆಯನ್ನು ಕೊಡಬೇಕು. ಇದಕ್ಕೆ ಇತಿಮಿತಿ ಹಾಕಿ ಬಂದೋಬಸ್ತು ಮಾಡಬೇಕಾಗುತ್ತದೆ. ಈ ದಿಕ್ಕಿನಲ್ಲಿ ಆರು ತಿಂಗಳು ಕಾಲಾವಕಾಶ ತೆಗೆದುಕೊಂಡು ಈ ಅನಧಿಕೃತ ಪಂಪ್‌ಸೆಟ್‌ಗಳಿಗೆ ಸಹ ಒಂದು ಆರು ಕೋಟಿ ರೂಪಾಯಿ ವೆಚ್ಚದಲ್ಲಿ ಖಾಯಂ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಹುಬ್ಬಳ್ಳಿ ಕಂಪನಿ ವ್ಯಾಪ್ತಿಯಲ್ಲಿ ಒಟ್ಟು 40,000 ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳು ಇವೆ. ಇದರ ಪರಿಸ್ಥಿತಿಗಳೇನು? ಏನಾಗುತ್ತಿದೆ ಎಂದು ನಮ್ಮ ಗೌರವಾನ್ವಿತ ಸದಸ್ಯರು ಹೇಳುವ. ಅಗತ್ಯವಿಲ್ಲ. ಆದರೆ ರೈತರುಗಳಿಗೆ ದೊಡ್ಡ ದೊಡ್ಡ ನೀರಾವರಿ

ಯೋಜನೆಗಳಿಗೆ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡುತ್ತಿರುವಂತಹ ಕಾಲದಲ್ಲಿ ರೈತನ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಟ್ಟು ನಾವು ಹೆಚ್ಚಿನ ನೀರಾವರಿ ವ್ಯವಸ್ಥೆ ಮಾಡಬೇಕೆಂದು ನಮ್ಮ ಕಳಕಳಿ ಇದೆ. ನೀವು ಈಗಾಗಲೇ ಕೆಲವು ಸಲಹೆಗಳನ್ನು ಕೊಟ್ಟಿದ್ದೀರಿ, ಆ ಪ್ರಕಾರ ಸುಧಾರಣೆ ಮಾಡುತ್ತೇವೆ. ಇದು ನಿಮ್ಮ ತಾಲ್ಲೂಕಿಗೆ ಅಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತಹ ವಿಷಯವಾಗಿದ್ದು, ನಿಮ್ಮನ್ನು ಕರೆಸಿ ಪರಿವರ್ತಕಗಳಲ್ಲಿ ಸಮಸ್ಯೆಗಳು ಏನಿವೆ ಅದನ್ನು ಸರಿಪಡಿಸುವುದಕ್ಕೆ ಏನೇನು ಸಾಧ್ಯವಿದೆ ಎನ್ನುವುದನ್ನು ನೋಡಿ ನಿಮ್ಮ ಸಲಹೆಗಳನ್ನು ಸ್ವೀಕಾರ ಮಾಡಿ ಸರಿಪಡಿಸುತ್ತೇನೆ.

ದಾವಣಗೆರೆ ಜಿಲ್ಲೆಯಲ್ಲಿ ವನ್ಯ ಪ್ರಾಣಿಗಳಿಂದ ಹಾನಿಯ ಬಗ್ಗೆ

100 (924) ಶ್ರೀ ರಾಮಚಂದ್ರ ಎಸ್. ವಿ. (ಜಗಳೂರು) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದಾವಣಗೆರೆ ಜಿಲ್ಲೆಯಲ್ಲಿ ಇಲ್ಲಿಯವರೆಗೆ ವನ್ಯಪ್ರಾಣಿಗಳಿಂದ ಹಾನಿಗೊಳಗಾದವರಿಗೆ ಹಾಗೂ ಬೆಳೆ ನಷ್ಟಕ್ಕೆ ಪರಿಹಾರ ನೀಡಿದ ಪ್ರಕರಣಗಳೆಷ್ಟು; ಮತ್ತು ಎಷ್ಟು ಪರಿಹಾರ ವಿತರಿಸಲಾಗಿದೆ;

ಆ) ವನ್ಯಪ್ರಾಣಿ ಹಾನಿಯಿಂದ ನಷ್ಟವಾದ ಪ್ರಕರಣಗಳಿಗೆ ವಿತರಿಸುತ್ತಿರುವ ಪರಿಹಾರ ಕಡಿಮೆ ಇದ್ದು ಹೆಚ್ಚು ಮಾಡಲು ಕ್ರಮ ಜರುಗಿಸಲಾಗಿದೆಯೇ;

ಇ) ಜಗಳೂರು ವಿಧಾನ ಸಭಾ ಕ್ಷೇತ್ರ ಹಿಂದುಳಿದ ಜನಾಂಗದವರೇ ಜಾಸ್ತಿ ಇದ್ದು ಕಾಡು ಹಂದಿಗಳಿಂದ ರೈತರಿಗೆ ಬೆಳೆ ನಷ್ಟವಾಗುತ್ತಿದ್ದು, ಈ ಬಗ್ಗೆ ಹೆಚ್ಚು ಪರಿಹಾರ ನೀಡಲು ಕ್ರಮ ಜರುಗಿಸಲಾಗುವುದೇ?

ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :–

ಅ) ದಾವಣಗೆರೆ ಜಿಲ್ಲೆಯಲ್ಲಿ 2009–10ನೇ ಸಾಲಿನಲ್ಲಿ ವನ್ಯಪ್ರಾಣಿಗಳಿಂದ ಹಾನಿಗೊಳಗಾದವರಿಗೆ ಹಾಗೂ ಬೆಳೆ ನಷ್ಟಕ್ಕೆ ಪರಿಹಾರ ನೀಡಿದ ಪ್ರಕರಣಗಳು ಮತ್ತು ವಿತರಿಸಲಾದ ಪರಿಹಾರದ ಮೊತ್ತ ಈ ಕೆಳಕಂಡಂತಿದೆ:–

ಕ್ರ.ಸಂ.	ಪ್ರಕರಣದ ವಿವರ	ಪ್ರಕರಣ ಸಂಖ್ಯೆ	ಪಾವತಿಸಲಾದ ದಯಾತ್ಮಕಧನ ರೂ.ಗಳಲ್ಲಿ